# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೧<br>Part – I | ಬೆಂಗಳೂರು, ಮಂಗಳವಾರ, ೨೫, ಆಗಸ್ಟ್, ೨೦೨೬ (ಭಾದ್ರಪದ, ೦೩, ಶಕವರ್ಷ, ೧೯೪೮)<br>BENGALURU, TUESDAY, 25, AUGUST, 2026 (BHADRAPADA , 03, SHAKAVARSHA, 1948) | ನಂ. ೭೭೩<br>No. 773 |
|---|---|---|

## <u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ಮೇದೋಜ್ಜೀರಕ ಗ್ರಂಥಿ ಕಸಿ(Pancreas Transplant) ಶಸ್ತ್ರಚಿಕಿತ್ಸೆಗೆ ಒಳಪಟ್ಟ ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅರ್ಹ ಅವಲಂಬಿತ ಸದಸ್ಯರಿಗೆ ವೈದ್ಯಕೀಯ ವೆಚ್ಚದ ಮರುಪಾವತಿ ದರವನ್ನು ನಿಗದಿಪಡಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 48 ಎಸ್ಎಂಆರ್ 2018, ದಿನಾಂಕ: 20.05.2019.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 48 ಎಸ್ಎಂಆರ್ 2018(ಭಾ), ದಿನಾಂಕ: 13.09.2019.
3. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದ ಪತ್ರ ಸಂಖ್ಯೆ: ಜೆಡಿಎಂ/ಎಂಡಿಎ(02)/506/2018-19, ದಿನಾಂಕ: 07.05.2025

***

**<u>ಪ್ರಸ್ತಾವನೆ:</u>**

ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅರ್ಹ ಅವಲಂಬಿತ ಸದಸ್ಯರು ಸರ್ಕಾರಿ ಆಸ್ಪತ್ರೆ ಹಾಗೂ ಸರ್ಕಾರದ ಮಾನ್ಯತೆ ಹೊಂದಿದ ಖಾಸಗಿ ಆಸ್ಪತ್ರೆಗಳಲ್ಲಿ ಪಡೆದ ವೈದ್ಯಕೀಯ ಚಿಕಿತ್ಸೆಯ ವೆಚ್ಚದ ಮರುಪಾವತಿಯನ್ನು ಸಿ.ಜಿ.ಹೆಚ್.ಎಸ್. ದರಪಟ್ಟಿಯನ್ವಯ ಆಯಾ ಇಲಾಖಾ ಹಂತದಲ್ಲಿ ಪರಿಶೀಲಿಸಿ ಮಂಜೂರು ಮಾಡಲು ಕರ್ನಾಟಕ ಸರ್ಕಾರಿ ನೌಕರರ (ವೈದಕೀಯ ಹಾಜರಾತಿ) ನಿಯಮಗಳು, 1963 ಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಸರ್ಕಾರದ ಮಾನ್ಯತೆ ಹೊಂದಿಲ್ಲದ ಖಾಸಗಿ ಆಸ್ಪತ್ರೆಗಳಲ್ಲಿ ಕೆಲವೊಂದು ತುರ್ತು ಸಂದರ್ಭಗಳಲ್ಲಿ ಪಡೆದ ವೈದ್ಯಕೀಯ ಚಿಕಿತ್ಸಾ ವೆಚ್ಚವನ್ನು ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (SAST) ಇವರಿಂದ ಅರ್ಹತಾ ಮೊತ್ತದ ಬಗ್ಗೆ ಅಭಿಪ್ರಾಯವನ್ನು ಪಡೆದು ಮರುಪಾವತಿಸಲು ಮೇಲೆ ಓದಲಾದ (1)ರ ಆದೇಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.

ಮೇದೋಜ್ಜೀರಕ ಗ್ರಂಥಿ ಕಸಿ (Pancreas Transplant) ಶಸ್ತ್ರಚಿಕಿತ್ಸೆಗೆ ವೈದ್ಯಕೀಯ ವೆಚ್ಚ ಮರುಪಾವತಿಸುವಂತೆ ಹಾಗೂ ತೆಗೆದುಕೊಳ್ಳಬೇಕಾಗಿರುವ ಕ್ರಮದ ಕುರಿತು ಮಾರ್ಗದರ್ಶನ ಕೋರಿ ಹಲವಾರು ಪ್ರಸ್ತಾವನೆಗಳು ಸರ್ಕಾರದಲ್ಲಿ ಸ್ವೀಕೃತವಾಗುತ್ತಿವೆ. ಆದರೆ, ಸದರಿ ಶಸ್ತ್ರಚಿಕಿತ್ಸೆಗೆ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಸಿ.ಜಿ.ಹೆಚ್.ಎಸ್. ದರಪಟ್ಟಿಯಲ್ಲಿ ಮೊತ್ತವನ್ನು ನಿಗದಿಪಡಿಸಿರುವು ದಿಲ್ಲವಾದ್ದರಿಂದ, ಇಂತಹ ಚಿಕಿತ್ಸೆಗಳಿಗೆ ದುಬಾರಿ ವೆಚ್ಚವನ್ನು ಸರ್ಕಾರಿ ನೌಕರರು ಭರಿಸಬೇಕಾಗಿರುವುದರಿಂದ ಮೊತ್ತವನ್ನು ಮರುಪಾವತಿಸಲು ಅರ್ಹ ಮೊತ್ತವನ್ನು ನಿಗದಿಪಡಿಸಲು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರು ರಚಿಸಿದ ತಜ್ಞರ ಸಮಿತಿಯು ದಿನಾಂಕ 09.07.2024ರಂದು ಜರುಗಿದ ಸಭೆಯಲ್ಲಿ ಮೇದೋಜ್ಜೀರಕ ಗ್ರಂಥಿ ಕಸಿ(Pancreas Transplant) ಶಸ್ತ್ರ ಚಿಕಿತ್ಸೆಗೆ ನಿಗದಿಪಡಿಸಿರುವ ಪ್ಯಾಕೇಜ್ ದರವನ್ನು ಅಳವಡಿಸಬೇಕಾಗಿರುತ್ತದೆಂದು ಮೇಲೆ ಓದಲಾದ (3)ರ ಪತ್ರದಲ್ಲಿ ನಿರ್ದೇಶಕರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅರ್ಹ ಅವಲಂಬಿತ ಸದಸ್ಯರು ಮೇದೋಜ್ಜೀರಕ ಗ್ರಂಥಿ ಕಸಿ(Pancreas Transplant) ಪಡೆಯುವ ಚಿಕಿತ್ಸೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಸಮಿತಿಯು ಮರುಪಾವತಿಸಲು ಶಿಫಾರಸ್ಸು ಮಾಡಿರುವ ಮೊತ್ತ ರೂ 5.00 ಲಕ್ಷಗಳನ್ನು ನಿಗದಿಪಡಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 121 ಎಸ್ಎಂಆರ್ 2025,</u>**
**<u>ಬೆಂಗಳೂರು, ದಿನಾಂಕ: 24.08.2026.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅರ್ಹ ಅವಲಂಬಿತ ಸದಸ್ಯರು ಮೇದೋಜ್ಜೀರಕ ಗ್ರಂಥಿ ಕಸಿ (Pancreas Transplant)ಗೆ ವೈದ್ಯಕೀಯ ಚಿಕಿತ್ಸೆಗೆ ಭರಿಸುವ ವೆಚ್ಚಗಳಿಗೆ ರೂ. 5.00 ಲಕ್ಷ (ರೂಪಾಯಿಗಳು ಐದು ಲಕ್ಷ ಮಾತ್ರ) ಮರುಪಾವತಿಸಲು ಸರ್ಕಾರವು ತಾತ್ವಿಕವಾಗಿ (in principle) ನಿಗದಿಪಡಿಸಿ ಆದೇಶಿಸಿದೆ.

ಆರ್ಥಿಕ ಮೌಲ್ಯಮಾಪನ ಹಾಗೂ ಅಂತಿಮವಾಗಿ Pancreas Transplant ಗೆ ಪ್ರಮಾಣಿತ ವೆಚ್ಚದ ಮಾದರಿ (Standard Costing Template) ಆಧಾರ ಮೇಲೆ ದರಗಳನ್ನು ನಿಗದಿಪಡಿಸಲು ಅನುವಾಗುವಂತೆ ಪ್ರಸ್ತುತ ಈ ಆದೇಶದನುಸಾರ ತಾತ್ಕಾಲಿಕ ದರದಲ್ಲಿ ಮಂಜೂರಾತಿ ನೀಡುವ ಎಲ್ಲಾ Pancreas Transplant ಪ್ರಕರಣಗಳ ಕ್ಲೇಮುಗಳನ್ನು ಕಾಲಕಾಲಕ್ಕೆ (ತ್ರೈಮಾಸಿಕ) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರಿಗೆ ವರದಿ ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ದಿನಾಂಕ 05.05.2026 ರ ಹಿಂಬರಹ ಸಂಖ್ಯೆ: ಆಇ/195/ಸೇ-1/2026ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಆರ್. ಶಿವಶಂಕರ್)
ಸರ್ಕಾರದ ಉಪ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-3)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU